ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತಗೊಳಿಸುವ ಹಿನ್ನಲೆಯಲ್ಲಿ ಅಭಿವೃದ್ಧಿ ಶುಲ್ಕವನ್ನು ವಸೂಲಿ ಮಾಡುವುದಕ್ಕೆ ಅನುಕೂಲವಾಗುವಂತೆ ನಗರಾಭಿವೃದ್ಧಿ ಪ್ರಾಧಿಕಾರದ ತಿದ್ದುಪಡಿ ಕಾನೂನನ್ನು ತರುತ್ತೇವೆಂದು ಹೇಳಿದ್ದಾರೆ, ಅದು ಬಹಳ ಸಮಂಜಸವಾಗಿದೆ; ತಾವು ಅದಷ್ಟು ಶೀಘ್ರವಾಗಿ ಪ್ರಸ್ತಾವನೆಯನ್ನು ತರುತ್ತೀರಾ? ನಗರಸಭೆಯ ಆರ್ಥಿಕ ಪರಿಸ್ಥಿತಿಯನ್ನು ಅಭಿವೃದ್ಧಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ :— ಅದಷ್ಟು ಶೀಘ್ರವಾಗಿ ಕಾನೂನಿನ ತಿದ್ದುಪಡಿಯನ್ನು ನಾವು ತರುತ್ತೇವೆ. ನಾನು ಮಾನ್ಯ ಸೋಮಣ್ಣನವರು ಕೇಳಿದ್ದಕ್ಕೆ ಹೇಳುತ್ತೇನೆ, ಎಲ್ಲಿ ನಗರಾಭಿವೃದ್ಧಿ ಪ್ರಾಧಿಕಾರ ಇರುವುದಿಲ್ಲ, ಅಲ್ಲಿ ನಮ್ಮ ಮುನಿಸಿಪಾಲಿಟಿಗಳವರು ವಸೂಲಿ ಮಾಡುವುದಕ್ಕೆ ನಾವು ಅವಕಾಶವನ್ನು ಇಟ್ಟುಕೊಂಡಿರುತ್ತೇವೆ. ಎಲ್ಲಿ ಈ ಎರಡು ವ್ಯವಸ್ಥೆಗಳು ಇರುತ್ತವೆ, ಅಲ್ಲಿ ಇಂತಹ ಸಮಸ್ಯೆ ಉದ್ಭವವಾಗುತ್ತದೆ. ಇದರ ಬಗ್ಗೆ ಉಳಿದ ಕಡೆ ಏನು ಸಮಸ್ಯೆ ಇರುವುದಿಲ್ಲ.

ಮಳವಳ್ಳಿ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ.

480 (4137) ಶ್ರೀ ಸೋಮಶೇಖರ್ ಬಿ. (ಮಳವಳ್ಳಿ) :— ಮಾನ್ಯ ನಗರಾಭಿವದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಡ್ಯ ಜಿಲ್ಲೆ ಮಳವಳ್ಳಿ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ ಮಂಜೂರಾದದ್ದು ಎಂದು?

ಆ) ಈ ಯೋಜನೆಗೆ ಒದಗಿಸಲಾದ ಹಣ ಎಷ್ಟು? ಮತ್ತು ಇದುವರೆವಿಗೂ ಖರ್ಚು ಮಾಡಲಾದ ಹಣ ಎಷ್ಟು?

ಇ) ಈ ಯೋಜನೆಯನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಅ) ದಿನಾಂಕ 23-12-93ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಆ) ಈ ಯೋಜನೆಗೆ ಈವರೆಗೆ ರೂ. 230 ಲಕ್ಷ ಗಳನ್ನು ಒದಗಿಸಲಾಗಿದೆ. ಇದುವರೆವಿಗೂ ಈ ಯೋಜನೆಗೆ ಖರ್ಚು ಮಾಡಲಾದ ಹಣ ರೂ. 286.34 ಲಕ್ಷಗಳು.

ಇ) ಈ ಯೋಜನೆಯನ್ನು ಮಾರ್ಚ್ 2001ಕ್ಕೆ ಚಾಲನೆ ಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ಬಿ. ಸೋಮಶೇಖರ್ :— ಮಾನ್ಯ ಅಧ್ಯಕ್ಷರೆ, ಈ ಯೋಜನೆಯು ಮಳವಳ್ಳಿ ಪಟ್ಟಣಕ್ಕೆ ಮಂಜೂರಾಗಿ ಅನೇಕ ವರ್ಷಗಳಾಗಿವೆ ಈ ಯೋಜನೆಗೆ ಮಂಜೂರಾಗಿರುವ

ಹಣಕ್ಕೂ ಖರ್ಚು ಮಾಡಲಾಗಿರುವ ಹಣಕ್ಕೂ 50 ಲಕ್ಷ ರೂಪಾಯಿಗಳು ಜಾಸ್ತಿಯಾಗಿದೆ. ಇದನ್ನು ಪೂರ್ಣ 2001ನೇ ಇಸವಿಯ ಹೊತ್ತಿಗೆ ಪೂರ್ಣಗೊಳಿಸುತ್ತೇವೆಂದು ತಾವು ಹೇಳುತ್ತೀರಿ. ಈಗಾಗಲೇ ಎಸ್ಟಲೇಷನ್‌ಗೆ 50 ಲಕ್ಷ ರೂಪಾಯಿಗಳು ಖರ್ಚು ಆಗಿದೆ, ಅದು ಇನ್ನೂ ಎಸ್ಕಲೇಷನ್ ಆಗುತ್ತದೆಯೋ, ಅದರೊಳಗಾಗಿ ಖಂಡಿತವಾಗಿಯೂ ಮುಗಿಸಿಕೊಡುತ್ತೀರಾ? ಇನ್ನು ಎರಡನೆಯದಾಗಿ ಆ ಎನ್ ರೂಟ್ ವಿಲೇಜಸ್‌ಗೆ ಯಾವುದು ಈಗಾಗಲೇ ಸರ್ಕಾರದ ಆದೇಶದ ಪ್ರಕಾರ ಪಟ್ಟಿಯನ್ನು ಮಾಡಿದ್ದಾರೆ, ನೀರನ್ನು ಕೊಡತಕ್ಕ ಕಾರ್ಯಕ್ರಮಗಳನ್ನು ಯಾವಾಗ ಹಾಕಿಕೊಳ್ಳುತ್ತೀರಾ? ಕಾವೇರಿ ನದಿಯಿಂದ ನೀರನ್ನು ಮಳವಳ್ಳಿ ಪಟ್ಟಣಕ್ಕೆ ತರಬೇಕಾದರೆ ಇದರ ಬಗ್ಗೆ ಈಗಾಗಲೇ ಸರ್ಕಾರದ ಆದೇಶವಾಗಿದೆ. ಇದರ ಬಗ್ಗೆ ನಾವು 1995ನೇ ಇಸವಿಯಲ್ಲಿ ಪಟ್ಟಣ ಪ್ರದೇಶಗಳಿಗೆ ನೀರನ್ನು ತೆಗೆದುಕೊಂಡು ಹೋಗುವಾಗ ಅದು ಅರ್ಬನ್ ವಾಟರ್ ಸಪ್ಲೈ ಅಂಡ್ ಡ್ರೈನೇಜ್ ಬೋರ್ಡ್‌ನವರದು, ಹಳ್ಳಿಗಳ ಕಡೆ ಬಂದರೆ ಬೆಳಕಿನ ಕಡೆ ಕತ್ತಲು ಇದ್ದಹಾಗೆ ಇರಬಾರದು, ಆ ನೀರು ಯಾವ ಹಳ್ಳಿಗಳ ಮುಖಾಂತರ ಹಾದು ಹೋಗುತ್ತದೆ ಆ ನೀರಿನ ಸೌಲಭ್ಯವನ್ನು ಹಳ್ಳಿಗಳಿಗೂ ಕೊಡಬೇಕು, ಆ ನೀರನ್ನು ಕೊಡತಕ್ಕಂಥದ್ದು ಇವರ ಜವಾಬ್ದಾರಿಯಾಗಿರುತ್ತದೆ. ಆ ನೀರನ್ನು ಉಪಯೋಗಿಸಿಕೊಳ್ಳುವಂಥಾದ್ದು ಗ್ರಾಮೀಣಾಭಿವೃದ್ಧಿ ಇಲಾಖೆಯ ಜವಾಬ್ದಾರಿಯಾಗಿರುತ್ತದೆಂದು ನಾವು ಮಾಡಿದ್ದೇವೆ. ಪಾಯಿಂಟ್ ಆಫ್ ಸೋರ್ಸ್‌ನಲ್ಲಿ ಮೊದಲು ಇವರಿಗೆ ನೀರನ್ನು ಕೊಟ್ಟುಬಿಡುತ್ತಾರೆ, ಅದನ್ನು ಉಪಯೋಗಿಸಿಕೊಳ್ಳುವಂಥಾದ್ದು ಗ್ರಾಮೀಣಾಭಿವೃದ್ಧಿ ಇಲಾಖೆಯ ಜವಾಬ್ದಾರಿಯಾಗಿರುತ್ತದೆ. ಆ ಹಣವನ್ನು ಇವರಿಗೆ ಡೆಪಾಸಿಟ್ ಮಾಡುತ್ತಾರೆ. ಆ ಕಾನೂನಿನಲ್ಲಿ ಅನೇಕ ಹಳ್ಳಿಗಳನ್ನು ಗುರುತಿಸಿದ್ದೀರಿ, ರಾಜ್ಯಾದ್ಯಂತ ಈ ಸ್ಕೀಮ್ ಇದೆ. ನಮ್ಮ ಮಹಾಂತೇಶ್ ಕೌಜಲಗಿಯವರು ಹೇಳಿರುವಂಥದ್ದು ಏನಿದೆ ಈ ಪಾಲಿಸಿಯನ್ನು ನಮ್ಮ ಸರ್ಕಾರವಿದ್ದಾಗ ಮಾಡಿರುವಂಥದ್ದು. ನಮ್ಮ ಕಾವೇರಿ ನದಿಯಿಂದ ನೀರು ರಾಮನಗರಕ್ಕೆ ಬರಬೇಕಾದರೆ ಕನಕಪುರ, ಹಾರೋಹಳ್ಳಿ, ಸಾತನೂರು ಎಲ್ಲಾ ಊರುಗಳು ಬರುತ್ತದೆ, ಅದೇ ರೀತಿ ನಮ್ಮ ಕ್ಷೇತ್ರದಿಂದ ಹಲಗೂರು, ಮತ್ತೇ ಬೇರೆ ಬೇರೆ ಊರುಗಳು ಸಹ ಬರುತ್ತದೆ. ಅದೇ ರೀತಿಯಾಗಿ ನೀರನ್ನು ಮಳವಳ್ಳಿಗೆ ತರಬೇಕಾದರೆ ಬೇರೆ ಬೇರೆ ಊರುಗಳು ಸಹ ಬರುತ್ತದೆ, ತಾವು ಮೊದಲೇ ನೀರನ್ನು ಕೊಡುತ್ತೀರಾ, ಅಥವಾ ಮಾರ್ಜಿಯೊಳಗೆ ಖಂಡಿತವಾಗಿ ಮಾಡಿಕೊಡುತ್ತೀರಾ, ಅದಕ್ಕಿಂತ ಮುಂಚಿತವಾಗಿ ಮಾಡಿಸಿಕೊಡುತ್ತೀರಾ, ಅಥವಾ ಡಿಲೇ ಆಗುತ್ತದೆಯೇ ಎಂದು ನಾನು ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಬಿ. ಸೋಮಶೇಖರ್‌ರವರು ಈ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕೆ ತಾವೊಬ್ಬ ಕಂದಾಯ ಮಂತ್ರಿಗಳಾಗಿದ್ದಾಗ ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡಿದ್ದಾರೆ. ಅಲ್ಲಿ ಶುದ್ಧೀಕರಣ ಘಟಕವನ್ನು ಮಾಡುವುದಕ್ಕೆ ಸುಮಾರು 4 ವರ್ಷಗಳ ಕಾಲ ಬೇಕಾಯಿತು.

ಆ ಭೂಮಿಯನ್ನು ನಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕಾದರೆ ಲ್ಯಾಂಡ್ ಆಕ್ವಿಜಿಷನ್ ಆಗಬೇಕು, ಈ ಯೋಜನೆಯು ತಡವಾಗಬೇಕಾದರೆ ಅದು ಒಂದು ಕಾರಣವಾಯಿತು. ತಾವು ಇದರ ಬಗ್ಗೆ ಆಸಕ್ತಿಯನ್ನು ವಹಿಸಿರುವುದರಿಂದ ಆ ಕೆಲಸವು ಬಹಳ ಬೇಗ ಮುಗಿದಿದೆ. ಈಗಾಗಲೇ ನಾವು ಅದಕ್ಕೆ 2.86 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈಗ ಈ ಯೋಜನೆಯು ತಮ್ಮ ಅನಿಸಿಕೆಯ ಪ್ರಕಾರ ಬೇಗ ಮುಗಿಯಬೇಕು ಎಂದು ಇದೆ. ತಮಗೆ ಮಳವಳ್ಳಿ ಪಟ್ಟಣದ ಜನರಿಗೆ ನೀರನ್ನು ಕೊಡಬೇಕೆಂಬ ಕಾತುರ ಮತ್ತು ಆತುರಕ್ಕೆ ನಾನು ಇದರ ಬಗ್ಗೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಆದಷ್ಟು ಬೇಗ 2001ನೇ ಇಸವಿ ಮಾರ್ಚಿಯೊಳಗಡೆ ಈ ಯೋಜನೆಯನ್ನು ಕಾರ್ಯಗತಗೊಳಿಸಬೇಕೆಂದು ನಾವು ಆಲೋಚನೆಯನ್ನು ಮಾಡಿದ್ದೇವೆ. ಅದೇ ರೀತಿಯಾಗಿ ನಾವು ಅದನ್ನು ಮುಗಿಸಿಕೊಡುತ್ತೇವೆ. ಎನ್‌ರೂಟ್ ವಿಲೇಜಸ್ ಎಂದು 10 ಹಳ್ಳಿಗಳನ್ನು ಕೊಟ್ಟಿದ್ದಾರೆ, ಅವರಿಗೆ ನಾವು 45 ಲೀಟರ್ ನೀರನ್ನು ಕೊಡಬೇಕು, ಪಟ್ಟಣದವರಿಗೆ 90 ಲೀಟರ್ ನೀರನ್ನು ಕೊಡಬೇಕೆಂದು ಒಂದು ನಾರ್ಮ್ಸ್ ಇದೆ. ಆ 10 ಹಳ್ಳಿಗಳನ್ನು ಈ ಯೋಜನೆಯಲ್ಲಿ ಸೇರಿಸಿಕೊಂಡು ನೀರನ್ನು ಕೊಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ನನ್ನದೊಂದು ಸಲಹೆ ಇದೆ ಈಗ ಏನಾಗುತ್ತಿದೆಯೆಂದರೆ, ಪಟ್ಟಣ ಪ್ರದೇಶಗಳಲ್ಲಿ ನೀರನ್ನು ಕೊಡತಕ್ಕಂತಹ ಯೋಜನೆಗಳಲ್ಲಿ ಸೋರ್ಸ್‌ನಿಂದ ನೀರನ್ನು ಕೊಡುತ್ತೇವೆ, ಟ್ಯಾಂಕ್‌ನ್ನು ಕಟ್ಟುತ್ತೇವೆ, ಇದಾದ ಮೇಲೆ ಪೈಪ್‌ನಿಂದ ಟ್ಯಾಂಕ್‌ವರೆಗೆ ನೀರು ಹೋಗುತ್ತದೆ, ನಮ್ಮ ಎಲ್ಲಾ ಪಟ್ಟಣ ಪ್ರದೇಶಗಳಲ್ಲಿರತಕ್ಕಂತಹ ಸಂಸ್ಥೆಗಳು ಏನಿದೆ, ಆ ಸಂಸ್ಥೆಗಳಿಗೆ ಡಿಸ್ಟ್ರಿಬ್ಯೂಟರಿ ಪೈಪ್‌ಗಳನ್ನು ಹಾಕಿಕೊಳ್ಳುವುದಕ್ಕೆ ಆಗುತ್ತಿಲ್ಲ. ಹೀಗಾಗಿ ನಾವು ನೀರನ್ನು ತೆಗೆದುಕೊಂಡು ಹೋಗಿ ನಿಲ್ಲಿಸಿಕೊಂಡಿದ್ದರೂ ಸಹಾ KWSSBಯವರು ಅದನ್ನು ತೆಗೆದುಕೊಂಡು ಟ್ಯಾಂಕ್‌ವರೆಗೂ ನಿಲ್ಲಿಸುತ್ತಾರೆ. ಇದಾದನಂತರ ಸುಮಾರು 20 ರಿಂದ 50 ವರ್ಷಗಳ ಹಿಂದೆ ಹಾಕಿರತಕ್ಕಂತಹ ಪೈಪ್‌ಗಳ ಮೂಲಕವೇ ನೀರನ್ನು ಕೊಡಬೇಕಾಗುತ್ತದೆ. ನಾನು ತಮಗೆ ಏನು ಪ್ರಶ್ನೆಯನ್ನು ಕೇಳಬೇಕಾಗಿರುವುದೆಂದರೆ, ಇಡೀ ರಾಜ್ಯದಲ್ಲಿರತಕ್ಕಂತಹ KWSSBಯಿಂದ ಎಷ್ಟು ಸ್ಕೀಮ್‌ಗಳನ್ನು ಕಂಪ್ಲೀಟ್ ಮಾಡುವುದಕ್ಕೆ ತೆಗೆದುಕೊಂಡಿದ್ದಾರೋ ಅದರಲ್ಲಿ ಕೆಲವು ಕಂಪ್ಲೀಟ್ ಆಗಿಲ್ಲ, ಅದರಲ್ಲಿ ಕೆಲವು ಎಡಿಬಿಯಿಂದ ಸಾಲವನ್ನು ತೆಗೆದುಕೊಂಡಿದ್ದೇವೆ, ವಿಶ್ವಬ್ಯಾಂಕಿನಿಂದ, ಎಲ್‌ಐಸಿಯಿಂದ, ಐಡಿಬಿಯಿಂದ ಹಾಗೂ ಬೇರೆ ಬೇರೆ ಸಂಸ್ಥೆಗಳಿಂದ ಸಾಲವನ್ನು ತೆಗೆದುಕೊಂಡಿದ್ದೇವೆ. ಒಂದು ವಿಶೇಷವಾದ ಯೋಜನೆಯನ್ನು ಮಾಡಿ ಈ ಡಿಸ್ಟ್ರಿಬ್ಯೂಟರಿ ಪೈಪ್‌ಗಳನ್ನು ಹಾಕಿಕೊಡದೆ ಹೋದರೆ ಅವರಿಗೆ ನೀರನ್ನು ಕೊಟ್ಟರೂ ಸಹ ಉಪಯೋಗವಾಗುವುದಿಲ್ಲ. ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲವೇ ಎಂದು ನಾನು ತಮ್ಮನ್ನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ :— ಸನ್ಮಾನ್ಯ ಸಿಂಧ್ಯರವರು ಬಹಳ ಮಹತ್ತರವಾದಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದು ದುರಾದೃಷ್ಟವೋ ಅಥವಾ ಸುದೈವವೋ ನನಗೆ ಗೊತ್ತಿಲ್ಲ. ಈ ಯೋಜನೆಯ ಮೂಲಕ ಎಲ್ಲಾ ಪಟ್ಟಣಗಳಿಗೆ ಆದಷ್ಟು ಬೇಗ ನೀರನ್ನು ಕೊಡಬೇಕೆಂಬ ಆತುರ ಇದೆ. ಇದುವರೆಗೂ ನಮ್ಮ ಬೋರ್ಡಿನವರು ಈ ಯೋಜನೆಯನ್ನು ಕಾರ್ಯಗತಗೊಳಿಸಿದ್ದಾರೆ. ಬಲ್ಕ್ ನೀರನ್ನು ಪಟ್ಟಣಕ್ಕೆ ಕೊಡುವುದು, ಆದರೆ ಡಿಸ್ಟ್ರಿಬ್ಯೂಷನ್‌ನ್ನು ಮಾಡುವ ಹಾಗಿಲ್ಲ, ಈ ಯೋಜನೆಗೆ ಡಿಸ್ಟ್ರಿಬ್ಯೂಷನ್ ಇರಲಿಲ್ಲವೆಂದರೆ ನಾವು ದುಡ್ಡು ಖರ್ಚು ಮಾಡಿ ಯೋಜನೆಯನ್ನು ಕಾರ್ಯಗತಗೊಳಿಸಿದರೂ ಅದು ವೇಸ್ಟ್ ಆಗುತ್ತದೆ. ಅದೇ ರೀತಿಯಾಗಿ ನಾವು ಕೊಪ್ಪಳದಲ್ಲಿ ತುಂಗಭದ್ರಾ ಜಲಾಶಯದಿಂದ ನೀರನ್ನು ಕೊಟ್ಟಿದ್ದೇವೆ. ಅಲ್ಲಿ ಸುಮಾರು 10-20 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಈ ಯೋಜನೆಯಿಂದ ನೀರನ್ನು ಪಟ್ಟಣಕ್ಕೆ ಒದಗಿಸಿದರೆ, ಯೋಜನೆಯು ಕಾರ್ಯಗತವಾದಂತೆ ಆಗಲಿಲ್ಲ. ಈ ಡಿಸ್ಟ್ರಿಬ್ಯೂಷನ್ ಯೋಜನೆಯು ಇಲ್ಲವಾದರೆ ನಿಜವಾಗಲೂ ಯೋಜನೆಯ ರೂಪರೇಷೆಗಳನ್ನು ಮಾಡತಕ್ಕಂತಹ ಸಂದರ್ಭದಲ್ಲಿ ಡಿಸ್ಟ್ರಿಬ್ಯೂಷನ್‌ನ್ನು ಕೂಡಿಸಿಕೊಂಡು ಬಿಟ್ಟಿದ್ದರೆ ತೊಂದರೆಯಾಗುತ್ತಿರಲಿಲ್ಲ. ಆ ಯೋಜನೆಗಳಿಗೆ ಡಿಸ್ಟ್ರಿಬ್ಯೂಷನ್‌ನ್ನು ಕೂಡಿಸಿಕೊಳ್ಳಲಿಲ್ಲ. ಇದಕ್ಕೆ ಹಣದ ತೊಂದರೆಯಿರಬಹುದು ಅಥವಾ ಇನ್ನೇನೋ ಕಾರಣಗಳಿರಬಹುದು; ಇದು ಬಹಳ ದೊಡ್ಡ ಜಟಿಲವಾದ ಸಮಸ್ಯೆಯಾಗಿದೆ, ಇದರ ಬಗ್ಗೆ ನಾನು ಇನ್ನೊಂದು ಸಲ ಬೇಕಾದರೆ ಹೇಳುತ್ತೇನೆ. ತಾವು ಒಟ್ಟಾರೆಯಾಗಿ ಹೇಳಿರತಕ್ಕಂತಹ ವಿಚಾರವೇನಿದೆ ಬಹಳ ಸೂಕ್ತವಾದಂಥದ್ದು, ಅದು ಬಹಳ ಒಳ್ಳೆಯ ಸಲಹೆಯಾಗಿದೆ. ಇದನ್ನು ಮುಂಬರುವ ಯೋಜನೆಗಳಿಗೆ ಈ ಡಿಸ್ಟ್ರಿಬ್ಯೂಷನ್‌ನ್ನು ಮಾಡಿದ್ದೇ ಆದರೆ ಇದನ್ನು ಪೂರ್ತಿಯಾಗಿ ಸಮಗ್ರವಾಗಿ ಪ್ರತಿ ಪಟ್ಟಣದಲ್ಲಿರತಕ್ಕಂತಹ ಪ್ರಜೆಗಳಿಗೂ ಕೂಡ ನಾವು ಸರಿಯಾದಂತಹ ನೀರನ್ನು ಕೊಡುವಂತಹ ವ್ಯವಸ್ಥೆ ಆಗಬಹುದು ಎಂದು ನಾನೂ ಕೂಡ ಒಪ್ಪುತ್ತೇನೆ.

ಶ್ರೀ ಬಿ. ಸೋಮಶೇಖರ್ :— ಮಾನ್ಯ ಸಚಿವರು, ಈಗ ಇರತಕ್ಕಂತಹ ಯೋಜನೆಯಲ್ಲಿ ಇದನ್ನು ಅಟೆಂಡ್ ಮಾಡುತ್ತೇವೆಂದು ಹೇಳಬೇಕು; ಇಲ್ಲದಿದ್ದರೆ ಏನು ಪ್ರಯೋಜನವಾಗುವುದಿಲ್ಲ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ :— ಇದಾಗುವುದಿಲ್ಲ.

ಶ್ರೀ ಬಿ. ಸೋಮಶೇಖರ್ :— ಇದನ್ನು ತಾವು ಹೊಸದಾಗಿ ಸೇರಿಸಿಕೊಳ್ಳಬೇಕಾಗುತ್ತದೆ, ಇದನ್ನು ಮಾಡುವುದಕ್ಕೆ ತಮಗೆ ಅವಕಾಶವಿದೆ.. ಮುಂದಕ್ಕೆ ಮಾಡುತ್ತೇವೆಂದು ಹೇಳುತ್ತೀರಿ, ಹಿಂದಿನದನ್ನು ಏತಕ್ಕಾಗಿ ಮಾಡಬಾರದಯ ಈಗ ಇರತಕ್ಕಂತಹ ಯೋಜನೆಗಳಿಗೆ, ಇದನ್ನು ತಾವು ಪರಿಶೀಲನೆ ಮಾಡಬಹುದು.

ಅಧ್ಯಕ್ಷರು :— ಮಾನ್ಯ ರಾಮಲಿಂಗಾರೆಡ್ಡಿಯವರೆ, ನೀವು ಕೇಳಿರುವಂತಹ ಪ್ರಶ್ನೆ ಹಾಗೂ 4 ತಡೆಹಿಡಿಯಲಾದ ಪ್ರಶ್ನೆಗಳನ್ನು ಸೋಮವಾರ, ಮಂಗಳವಾರ